ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 150-155
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೆಣಸಿನಡು ಗ್ರಾಮದ ಹೊಯ್ಸಳ ಶೈಲಿಯ ಸುಂದರ ಕೇಶವ ಶಿಲ್ಪ

**ವೆಂಕಟೇಶ ಹೆಚ್**[1] **ಮತ್ತು ಪ್ರೊ. ಸರ್ವಮಂಗಳ**[2]
[1]ಸಂಶೋಧನಾ ವಿದ್ಯಾರ್ಥಿ, [2]ಮುಖ್ಯಸ್ಥರು,
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

**Abstract:**
*ಚಿತ್ರದುರ್ಗ ಜಿಲ್ಲೆಯು ಪ್ರಾಗೈತಿಹಾಸಿಕ ಕಾಲದಿಂದ ಬ್ರಿಟಿಷರ ಆಳ್ವಿಕೆಯ ಕಾಲದವರೆಗೆ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಈ ಪ್ರದೇಶದಲ್ಲಿ ಮೌರ್ಯ ಸಾಮ್ರಾಟ ಅಶೋಕನ ಶಾಸನಗಳು ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗರಾಮೇಶ್ವರಗಳಲ್ಲಿ ದೊರೆತಿವೆ. ಚಂದ್ರವಳ್ಳಿಯಲ್ಲಿ ಶಾತವಾಹನರ ಕಾಲದ ನಾಣ್ಯಗಳು ಮತ್ತು ಇತರ ಅವಶೇಷಗಳು ಹಾಗೂ ರೋಮನ್ ಚಕ್ರವರ್ತಿಗಳಾದ ಆಗಸ್ಟಸ್ ಮತ್ತು ಟೈಬೀರಿಯಸ್‌ರ ಕಾಲದ ನಾಣ್ಯಗಳು ದೊರೆತಿದ್ದು ಇವು ಶಾತವಾಹನರ ಆಳ್ವಿಕೆಯ ಬಗ್ಗೆ ಮತ್ತು ಪ್ರಾಚೀನ ಕಾಲದಲ್ಲೇ ಈ ಪ್ರದೇಶ ವಿದೇಶಗಳೊಂದಿಗೆ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಪರ್ಕವನ್ನು ಹೊಂದಿತ್ತು ಎನ್ನುವುದನ್ನು ತಿಳಿಸುತ್ತವೆ. ಮಯೂರವರ್ಮನ ಚಂದ್ರವಳ್ಳಿ ಶಾಸನ ಮತ್ತು ಅವನು ನಿರ್ಮಿಸಿದ್ದೆನ್ನಲಾದ ಚಂದ್ರವಳ್ಳಿಯ ತಟಾಕ ಕದಂಬರ ಚರಿತ್ರೆಗೆ ಸಾಕ್ಷಿಯಾಗಿವೆ. ಈಗಲೂ ಸದೃಢವಾಗಿರುವ ಚಿತ್ರದುರ್ಗದ ಏಳುಸುತ್ತಿನ ಕೋಟೆ ಪಾಳೆಯಗಾರರ ಶಕ್ತಿ ಸಾಮರ್ಥ್ಯ, ಶೌರ್ಯದ ಸಂಕೇತವಾಗಿ ಗತ ಇತಿಹಾಸವನ್ನು ಸಾರುವ ಸ್ಮಾರಕವಾಗಿದೆ. ಪ್ರಸ್ತುತ ಲೇಖನದಲ್ಲಿ ಮೆಣಸಿನಡು ಗ್ರಾಮದ ಹೊಯ್ಸಳ ಶೈಲಿಯ ಸುಂದರ ಕೇಶವ ಶಿಲ್ಪ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಕಲೆ ಮತ್ತು ವಾಸ್ತುಶಿಲ್ಪ, ಹೊಯ್ಸಳರು, ಮೆಣಸಿನಡು ಗ್ರಾಮ, ಕೇಶವ ಶಿಲ್ಪ.*

## ಪೀಠಿಕೆ

ಚಿತ್ರದುರ್ಗ ಜಿಲ್ಲೆಯ ಆರು ತಾಲೂಕುಗಳಲ್ಲಿ ಒಂದಾದ ಹೊಸದುರ್ಗ ತಾಲೂಕಿನ ಭೂಪ್ರದೇಶವು ಸಹ ಪ್ರಾಗೈತಿಹಾಸಿಕ ಕಾಲದಿಂದ ಬ್ರಿಟಿಷರ ಆಳ್ವಿಕೆಯ ಕಾಲದವರೆಗೆ ತನ್ನದೇ ಆದ ಚರಿತ್ರೆಯನ್ನು ಹೊಂದಿದೆ. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದ ನೀರ್ಗುಂದ, ಬಾಗೂರು, ಮೆಣಸಿನಡು, ಜಾನಕಲ್ಲು ಮತ್ತು ಹೆಗ್ಗೆರೆ ಮುಂತಾದ ಪ್ರದೇಶಗಳಲ್ಲಿ ಹಲವಾರು ಶೈವ ಮತ್ತು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡಿವೆ. ಈ ಸಂಗತಿಯು ಶಾಸನಗಳಿಂದ ಮತ್ತು ಈಗಲೂ ಸುಸ್ಥಿತಿಯಲ್ಲಿರುವ ಹೊಯ್ಸಳರ ದೇವಾಲಯಗಳಿಂದ ದೃಢಪಡುತ್ತದೆ.

ಹೊಸದುರ್ಗ ತಾಲೂಕಿನ ಮೆಣಸಿನಡು ಗ್ರಾಮವು ತಾಲೂಕು ಕೇಂದ್ರದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿದ್ದು, ಐತಿಹಾಸಿಕ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಶೈವ, ವೈಷ್ಣವ, ಜೈನ ಶಿಲ್ಪಗಳು, ವೀರಗಲ್ಲುಗಳು ಮತ್ತು ಶಾಸನವೂ ಕಂಡುಬಂದಿವೆ. ಈ ಅವಶೇಷಗಳು ಗ್ರಾಮದ ಐತಿಹಾಸಿಕ ಹಿನ್ನೆಲೆಯನ್ನು ತಿಳಿಸುತ್ತವೆ. ವಿಶೇಷವಾಗಿ ಇಲ್ಲಿ ದೊರೆತ ಶಾಸನವು ಮತ್ತು ಒಂದು ವಿಷ್ಣು

**Please cite this article as:** ವೆಂಕಟೇಶ ಹೆಚ್ ಮತ್ತು ಸರ್ವಮಂಗಳ. (2024). ಮೆಣಸಿನಡು ಗ್ರಾಮದ ಹೊಯ್ಸಳ ಶೈಲಿಯ ಸುಂದರ ಕೇಶವ ಶಿಲ್ಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(3), 150–155

ಶಿಲ್ಪವು ಹೊಯ್ಸಳರ ಕಾಲಘಟ್ಟದವಾಗಿವೆ. ಮೆಣಿಸಿನಡುವಿನ ಶಾಸನವನ್ನು ಬಿ.ಎಲ್ ರೈಸ್‌ರವರು ಎಫಿಗ್ರಫಿಯ ಕರ್ನಾಟಿಕ ಸಂಪುಟ–11(ಚಿತ್ರದುರ್ಗ ಜಿಲ್ಲೆ)ರಲ್ಲಿ ಸಂಪಾದಿಸಿ ಶಾಸನ ಪಾಠದ ವಿವರಣೆಯನ್ನು ನೀಡಿದ್ದಾರೆ. ಈ ಪ್ರಕಾರ ಈ ಶಾಸನವು ಕ್ರಿ.ಶ.1310ರ ಮುಮ್ಮಡಿ ಬಲ್ಲಾಳನ ಕಾಲದ್ದಾಗಿದೆ. ಮುಮ್ಮಡಿ ಬಲ್ಲಾಳನ ಮಹಾಸಾಮಂತಾಧಿಪತಿಯಾದ ಚಟ್ಟೇಯನಾಯಕನು ನೀರ್ಗುಂದ ನಾಡನ್ನು ಆಳುತ್ತಿದ್ದನು. ಇವನು ಪಾಂಡ್ಯರ ಅಸಂಖ್ಯಾತ ಸೈನ್ಯವನ್ನು ಸೋಲಿಸಿದನೆಂದು ತಿಳಿಸುತ್ತದೆ. ಹಾಗೆಯೇ ದೇವಾಲಯಗಳ ದುರಸ್ತಿಗಾಗಿ ಹಲವಾರು ಸುಂಕಗಳನ್ನು ಬಿಟ್ಟುಕೊಟ್ಟ ವಿಷಯವನ್ನು ತಿಳಿಸುತ್ತದೆ. ಮೆಣಿಸಿನಡು ಗ್ರಾಮವು ಸಹ ನೀರ್ಗುಂದ ನಾಡಿಗೆ ಸೇರಿತ್ತೆಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಇಲ್ಲೇ ಶಾಸನವನ್ನು ಹಾಕಿಸಿರುವುದು ಈ ಗ್ರಾಮವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ನೀರ್ಗುಂದ ನಾಡಿನ ಒಂದು ಪ್ರಮುಖ ಗ್ರಾಮವೂ ಆಗಿತ್ತೆಂಬುದನ್ನು ಸೂಚಿಸುತ್ತದೆ. ಅಲ್ಲದೆ ಇಲ್ಲಿ ದೊರೆತ ವಿಷ್ಣು ಶಿಲ್ಪವೂ ಸಹ ಧಾರ್ಮಿಕವಾಗಿಯೂ ಈ ಗ್ರಾಮ ಮಹತ್ವವನ್ನು ಹೊಂದಿತ್ತೆಂಬುದನ್ನು ಸೂಚಿಸುತ್ತದೆ.

ಹಿಂದೂ ಧರ್ಮದಲ್ಲಿ ವಿಷ್ಣುವು ತ್ರಿಮೂರ್ತಿ ದೇವರುಗಳಲ್ಲಿ ಎರಡನೆಯವನು. ಬ್ರಹ್ಮ ಸೃಷ್ಠಿಕರ್ತ, ವಿಷ್ಣು ರಕ್ಷಕ, ಶಿವ ಲಯಕರ್ತ. ಬ್ರಹ್ಮ ಮತ್ತು ಶಿವ ಸೃಷ್ಠಿ ಮತ್ತು ವಿನಾಶಕ್ಕೆ ಕಾರಣರಾದರೆ, ವಿಷ್ಣುವು ಜಗತ್ತಿನ ರಕ್ಷಣಾ ಕಾರ್ಯವನ್ನು ಮಾಡುವನು. ವಿಷ್ಣುವು ವಾಸ್ತವವಾಗಿ ಹಳೆಯ ವೈದಿಕ ದೇವರು. ಅವನು ಎಲ್ಲಾ ನಾಲ್ಕು ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ಅವನು ಸೂರ್ಯನೊಂದಿಗೆ ಗುರುತಿಸಲ್ಪಟ್ಟಿದ್ದಾನೆ. ಶಕಪಾಣಿಯ ಪ್ರಕಾರ ವಿಷ್ಣುವನ್ನು ಅಗ್ನಿಯ ಮಿಂಚು ಮತ್ತು ಸೂರ್ಯನ ಬೆಳಕು ಎಂಬ ಮೂರು ರೂಪಗಳೊಂದಿಗೆ ಸಮೀಕರಿಸಲಾಗಿದೆ. ಮತ್ತೊಬ್ಬ ವ್ಯಾಖ್ಯಾನಕಾರ ಔರ್‌ನೌಭ್‌ರವರ ಪ್ರಕಾರ ವಿಷ್ಣುವಿನ ಮೂರು ಹಂತಗಳು ಬೆಂಕಿ, ಬೆಳಕು ಮತ್ತು ಸೌರಬೆಳಕನ್ನು ಸೂಚಿಸುವುದಿಲ್ಲ. ಬದಲಾಗಿ ಸೂರ್ಯೋಧಯ, ಸೂರ್ಯನ ಪರಾಕಾಷ್ಠೆ ಮತ್ತು ಸೂರ್ಯಾಸ್ತಮವನ್ನು ಸೂಚಿಸುತ್ತದೆ.[1] ವಿಷ್ಣುವನ್ನು ನಾರಾಯಣನಾಗಿ ಸೂರ್ಯ ಮಂಡಲದಲ್ಲಿ ವಾಸಿಸುತ್ತಾನೆ ಎಂದು ವಿವರಿಸಲಾಗಿದೆ. ಮತ್ತು ಸೂರ್ಯನಾರಾಯಣನೆಂದು ಕರೆಯಲಾಗುವುದು. ಸೂರ್ಯನಾರಾಯಣ ಸಾಮಾನ್ಯವಾಗಿ ಭಾನುವಾರ ಮತ್ತು ಇತರ ನಿಗದಿತ ಸಂದರ್ಭಗಳಲ್ಲಿ ನಡೆಸುವ ಸೂರ್ಯನ ಆರಾಧನೆಯಲ್ಲಿ ವಿಷ್ಣುವು ಸೂರ್ಯ ಎಂಬ ಕಲ್ಪನೆಯನ್ನು ಇನ್ನೂ ನಿರ್ವಹಿಸಲಾಗುತ್ತದೆ. ಋಗ್ವೇದದಲ್ಲಿ ವಿಷ್ಣುವು ಒಂದು ಸ್ಥಳದಲ್ಲಿ 'ಪ್ರಾಚೀನ' ಮತ್ತು ಇನ್ನೊಂದು ಬಳಿ 'ರಕ್ಷಕ' ಎಂಬ ವಿಶೇಷಣವನ್ನು ಸ್ವೀಕರಿಸಿದ್ದಾನೆ. ಇತರೆಡೆಗಳಲ್ಲಿ ಯಜ್ಞ ನಾರಾಯಣ ಎಂಬ ಹೆಸರಿನಲ್ಲಿ ಪೂಜಿಸಲಾಗುತ್ತದೆ.[2]

ಪುರಾಣ ಮತ್ತು ಇತಿಹಾಸ ಕಾಲದಲ್ಲಿ ವಿಷ್ಣುವಿಗೆ ಶ್ರೇಷ್ಠ ಸ್ಥಾನವನ್ನು ಕಲ್ಪಿಸಲಾಗಿತ್ತು. ಹಿಂದೂ ತ್ರಿಮೂರ್ತಿಗಳಲ್ಲಿ ವಿಷ್ಣು ಸರ್ವೋಚ್ಚ ರಕ್ಷಕ ದೇವರಾಗಿದ್ದಾನೆ. ಹಿಂದೂ ದೇವತೆಗಳ ಸಾಲಿನಲ್ಲಿ ಶಿಲ್ಪಗಳಲ್ಲಿ ವಿಷ್ಣುವನ್ನು ವಿವಿಧ ರೂಪಗಳಲ್ಲಿ ನಿರ್ಮಿಸಿ ಪೂಜಿಸುವ ಪದ್ಧತಿಯು ಈ ಕಾಲಾವಧಿಯಲ್ಲಿ ಬೆಳೆದು ಬಂದಿತು. ಉಪಪುರಾಣಗಳು ಕೂಡ ವಿಷ್ಣುವಿನ ಪಾರಮ್ಯವನ್ನು ತಿಳಿಸುವಲ್ಲಿ ಸಹಾಯಕವಾಗುತ್ತವೆ. ಪುರಾಣಗಳಲ್ಲಿ ವಿಷ್ಣುಧರ್ಮೋತ್ತರ ಪುರಾಣ, ವಾಯು ಪುರಾಣ, ಮತ್ಸ್ಯ ಪುರಾಣ, ನರಸಿಂಹ ಪುರಾಣ, ಭಾಗವತ ಪುರಾಣ, ಹರಿವಂಶ ಪುರಾಣ ಮತ್ತು ಕಲ್ಕಿ ಪುರಾಣಗಳು ವಿಷ್ಣುವಿನ ಬಗ್ಗೆ ವಿವರಣೆಯನ್ನು ನೀಡುತ್ತವೆ. ವಿಷ್ಣುಧರ್ಮೋತ್ತರ ಪುರಾಣವು ಕಲೆ ಮತ್ತು ಪ್ರತಿಮಾ ಲಕ್ಷಣಗಳನ್ನು ಅರಿಯಲು ಇದು ವಿಪುಲ ಮಾಹಿತಿಯನ್ನು ನೀಡುತ್ತದೆ. ಉಳಿದ

[1] ಗೋಪಿನಾಥರಾವ್ ಟಿ.ಎ, (2021). *ಎಲಿಮೆಂಟ್ಸ ಆಫ್ ಹಿಂದೂ ಐಕೊನೊಗ್ರಫಿ* ಸಂ–1.ಭಾಗ–1, ಪುಟ. 73,74

[2] ಅದೇ. ಪುಟ.74

ಪುರಾಣಗಳು ದಂತಕಥೆಗಳ ಜೊತೆಗೆ ಪೌರಾಣಿಕ ಕಥೆಗಳನ್ನು ವಿಷ್ಣುವಿನ ವಿವಿಧ ಅವತಾರ ರೂಪಗಳ ಜೊತೆಗೆ ಹೆಣೆದುಕೊಂಡಿವೆ. ಕೆಲವು ಕಥೆಗಳು ವಿಷ್ಣುವಿನ ಪ್ರತಿಮಾ ಲಕ್ಷಣಗಳ ಪರಿಕಲ್ಪನೆಯನ್ನು ವಿವರಿಸುತ್ತವೆ.[3] ಆಗಮಗಳಾದ ವೈಖಾನಸಾಗಮ, ಪಾಂಚರಾತ್ರ ಮತ್ತು ಮಧ್ವಾಚಾರ್ಯರ ತಂತ್ರಸಾರವು ವಿಷ್ಣುವಿನ ಪ್ರತಿಮಾ ಲಕ್ಷಣಗಳ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ನೀಡುತ್ತದೆ. ಪಾಂಚರಾತ್ರಾಗಮವು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಪ್ರಚಲಿತವಿದ್ದ ಪಂಥವಾಗಿದೆ.[4]

ಹೊಯ್ಸಳ ನಾಡಿನಲ್ಲಿ ಶ್ರೀವೈಷ್ಣವ ಮತದ ಆಚಾರ್ಯರಾದ ಶ್ರೀರಾಮಾನುಜಾಚಾರ್ಯರು ಕೆಲವು ಕಾಲ ನೆಲೆಸಿದ್ದರು. ಆಚಾರ್ಯರ ಪ್ರಭಾವದಿಂದ ಹೊಯ್ಸಳ ನಾಡಿನಲ್ಲಿ ಅನೇಕ ವಿಷ್ಣು ದೇವಾಲಯಗಳು ನಿರ್ಮಾಣವಾದವು. ಅವರ ಆದೇಶದಂತೆ ಶ್ರೀವೈಷ್ಣವ ದೇವಾಲಯಗಳಲ್ಲಿ ಪಾಂಚರಾತ್ರಾಗಮದ ಪ್ರಕಾರ ಪೂಜೆ ಉತ್ಸವಗಳು ನಡೆಯತೊಡಗಿದವು. ಪಾಂಚರಾತ್ರದ ಪ್ರಕಾರ ದೇವಾಲಯಗಳಲ್ಲಿ ಗರ್ಭಗೃಹದ ಮೂಲಬೇರವಲ್ಲದೇ ಅರ್ಚಾಬೇರ, ಉತ್ಸವಬೇರ, ಸ್ನಪನಬೇರ ಮತ್ತು ಬಲಿಬೇರಗಳೆಂಬ ಐದು ಮೂರ್ತಿಗಳು ನೆಲೆಗೊಂಡವು. ಪಾಂಚರಾತ್ರ ಆಗಮವು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳ ಆರಾಧನೆಯನ್ನು ತಿಳಿಸಿದೆ. ಇದರಂತೆ ಹೊಯ್ಸಳ ದೇವಾಲಯಗಳ ಹೊರಭಿತ್ತಿಯಲ್ಲಿ ಚತುರ್ವಿಂಶತಿ ವಿಷ್ಣುಮೂರ್ತಿಗಳ ಉಬ್ಬುಶಿಲ್ಪಗಳನ್ನು ಕಾಣುತ್ತೇವೆ. ವಿಷ್ಣುವಿನ 'ದಶಾವತಾರ'ಗಳ ಶಿಲ್ಪಗಳು ಹೊಯ್ಸಳರ ಕಾಲದಲ್ಲಿ ಹಲವೆಡೆ ಕಾಣಬರುತ್ತವೆ. ಈ ಪರಂಪರೆಯ ಹಿನ್ನೆಲೆಯಲ್ಲಿ ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ಕೇಶವ, ನಾರಾಯಣ, ಜನಾರ್ಧನ, ವಾಸುದೇವ ಮೊದಲಾದ ರೂಪಗಳ ಜೊತೆಗೆ ರಾಮ, ಕೃಷ್ಣ, ನರಸಿಂಹ ಇತ್ಯಾದಿ ದೇವರುಗಳನ್ನೂ ಆರಾಧಿಸುತ್ತಿದ್ದರು.[5] ರಾಮಾನುಜಾರ್ಯರ ಪ್ರಭಾವದಿಂದ ಹೆಚ್ಚು ಜನರು ದೀಕ್ಷೆ ಪಡೆದು ಶ್ರೀವೈಷ್ಣವರಾದರು. ಶ್ರೀವೈಷ್ಣವರು ವಿಶೇಷವಾಗಿ ಕೇಶವನ ಆರಾಧನೆಗೆ ತೊಡಗಿದರು. ಹೊಯ್ಸಳರ ಕಾಲದಲ್ಲಿ ಕೇಶವನನ್ನು ರಾಜಪುರುಷನಂತೆ ರೂಪಿಸಲಾಗಿದೆ. ಆ ಶಿಲ್ಪಗಳಲ್ಲಿ ಮಕರಕುಂಡಲಗಳು, ಪದಕದ ಹಾರ, ಉರಹಾರ, ಉದ್ದವಾದ ವೈಜಯಂತಿ ಮಾಲೆಯಲ್ಲದೆ ಸುಂದರವಾದ ಮೇಖಲೆಯೂ ಇರುತ್ತವೆ. ಒಟ್ಟಿನಲ್ಲಿ ಹೊಯ್ಸಳರ ಕಾಲದ ಕೇಶವ ಶಿಲ್ಪಗಳು ಅತ್ಯಂತ ಸುಂದರವಾಗಿದ್ದು ಹಲವೆಡೆ ಇದನ್ನು 'ಚನ್ನಕೇಶವ', 'ಸೌಮ್ಯಕೇಶವ', 'ಪ್ರಸನ್ನ ಕೇಶವ' ಎಂದೂ ಕರೆಯಲಾಗಿದೆ. ಕೇಶವನ ಇಂಥ ಸುಂದರವಾದ ಶಿಲ್ಪಗಳನ್ನು ಬೇಲೂರು, ಹೆರಗು, ನಾಗಮಂಗಲ, ಹೊನ್ನಾವರ, ಶಾಂತಿಗ್ರಾಮ, ಅಂಗಡಿ, ಮರಳೆ, ಮೊಸಳೆ, ನಾಗಲಾಪುರ, ಅರಳಗುಪ್ಪೆ ಮುಂತಾದೆಡೆಗಳಲ್ಲಿ ಕಾಣುತ್ತೇವೆ.[6]

ಅಹಿರ್ಬುಧ್ನ್ಯ ಸಂಹಿತೆ ಪರವಾಸುದೇವನಿಂದ ಕೇಶವ, ನಾರಾಯಣ ಮತ್ತು ಮಾಧವ ಎಂಬ ಮೂರು ಇತರೆ ದೇವತೆಗಳು ಹುಟ್ಟಿದವೆಂದು ತಿಳಿಸುತ್ತದೆ.[7] ವಿಷ್ಣು ಸಹಸ್ರನಾಮದಲ್ಲಿ ಕೇಶವ ಎಂಬ ಶಬ್ದ ಎರಡು ಸಲ ಬಂದಿದೆ.[8] ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಮೊದಲನೇ ಸ್ವರೂಪವೇ ಕೇಶವ. ವಿಷ್ಣುವು ಕೇಶಿ ಎಂಬ ರಕ್ಕಸನನ್ನು ವಧಿಸಿ ಲೋಕಕಲ್ಯಾಣವನ್ನು ಉಂಟುಮಾಡಿದನು. ಜನರಿಗೆ ಕೇಶಿಯಿಂದ ಉಂಟಾಗಿದ್ದ ಸಂಕಷ್ಟಗಳನ್ನು ಪರಿಹರಿಸಿದ್ದರಿಂದ

3 ಪದ್ಮಜಾ ದೇಸಾಯಿ. *ಹಂಪಿ ಪರಿಸರದ ವೈಷ್ಣವ ಶಿಲ್ಪಗಳು* ಪುಟ. 118

4 ಗೋಪಿನಾಥರಾವ್ ಟಿ.ಎ. (2021). ಪೂರ್ವೋಕ್ತ. ಪುಟ. 77

5 ವಸಂತಲಕ್ಷ್ಮಿ ಕೆ. (ಲೇ), ಗೋಪಾಲರಾವ್ ಎಚ್.ಎಸ್ (ಸಂ.). (2019) *ಹೊಯ್ಸಳ ಶಿಲ್ಪಕಲ.* ಪುಟ. 93

6 ಅದೇ. ಪುಟ. 93,94

7 ಗೋಪಿನಾಥರಾವ್ ಟಿ.ಎ. (2021). ಪೂರ್ವೋಕ್ತ. ಪುಟ. 234

8 ಪದ್ಮಜಾ ದೇಸಾಯಿ, ಪೂರ್ವೋಕ್ತ. ಪುಟ. 210

ವಿಷ್ಣುವು 'ಕೇಶವ'ನೆಂದೂ, 'ಕೇಶವ ಕ್ಲೇಶನಾಶಾಯ' ಎಂಬ ನಾಣ್ಣುಡಿಯೂ ಪ್ರಚುರವಾಯಿತು. 'ಕೇಶ' ಎಂದರೆ ಮಂಡಿ, ಕೂದಲು ಎಂಬ ಅರ್ಥವಿದ್ದು, ಕೃಷ್ಣನ ಶಿರದಲ್ಲಿನ 'ಮಂಡಿ'ಯ ಪರಿಣಾಮವಾಗಿ ಕೃಷ್ಣನನ್ನು 'ಕೇಶವ' ಎಂದೂ ಕರೆದಂತಿದೆ. 'ಕ' ಎಂದರೆ ಬ್ರಹ್ಮನೆಂದೂ, 'ಈಶ' ಎಂದರೆ ಈಶ್ವರನೆಂದೂ ಭಾವಿಸಿ ಶಿವ ಮತ್ತು ಬ್ರಹ್ಮರಿಗೆ ಒಡೆಯನಾದ ಸಕಲ ಜಗತ್ತಿನ ಒಡೆಯನಾದ 'ಜಗದೀಶ್ವರ'ನೆಂಬ ಅರ್ಥದಿಂದಲೂ ಕೇಶವ ಪದವನ್ನು ಅರ್ಥೈಸುತ್ತಾರೆ. ವಿಷ್ಣುವಿನ ವ್ಯೂಹಾವತಾರಗಳಲ್ಲಿ ಮೊದಲನೆಯ ರೂಪವಾದ ಕೇಶವನಲ್ಲಿ ಪರವಾಸುದೇವನಲ್ಲಿರುವ ಷಡ್ಗುಣೈಶ್ವರ್ಯವು ತುಂಬಿರುತ್ತದೆ. ಈ ಕಾರಣದಿಂದ ವಿಷ್ಣುವನ್ನು ಕೇಶವನ ರೂಪದಲ್ಲಿ ಪೂಜಿಸತೊಡಗಿದರು. ಕರ್ನಾಟಕದಲ್ಲಿ ಕೇಶವನ ದೇವಾಲಯಗಳನ್ನು ಹತ್ತನೇ ಶತಮಾನದಿಂದ ಕಾಣುತ್ತೇವೆ.[9] ಚಿತ್ರದುರ್ಗ ಜಿಲ್ಲೆಯಲ್ಲಿ ಹಲವಾರು ಕೇಶವ ಶಿಲ್ಪಗಳು ಕಂಡುಬಂದಿದ್ದು, ಕೇಶವನನ್ನು ಚನ್ನಕೇಶವನೆಂದು ಕರೆದು ಹಲವಾರು ದೇವಾಲಯಗಳನ್ನು ನಿರ್ಮಿಸಿ ಆರಾಧನೆ ಮಾಡಿರುವುದು ಇಲ್ಲಿನ ದೇವಾಲಯಗಳು ಮತ್ತು ಶಿಲ್ಪಗಳಿಂದ ತಿಳಿಯುವ ಸಂಗತಿಯಾಗಿದೆ. ಅಂತಹ ಶಿಲ್ಪಗಳಲ್ಲಿ ಮೆಣಿಸಿನಡು ಗ್ರಾಮದಲ್ಲಿರುವ ಕೇಶವನ ಮೂರ್ತಿಶಿಲ್ಪವೂ ಒಂದಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಮೆಣಿಸಿನಡು ಎಂಬ ಗ್ರಾಮದ ಈಶ್ವರ ದೇವಾಲಯದ ಆವರಣದಲ್ಲಿ ಅತ್ಯಂತ ಸುಂದರವಾದ ಕೇಶವನ ಮೂರ್ತಿಶಿಲ್ಪವಿದೆ. ಶಾಸನವೂ ಸೇರಿದಂತೆ ಈ ಶಿಲ್ಪವು ಈ ಗ್ರಾಮದ ಕೆರೆಯ ಅಂಗಳದಲ್ಲಿ ದೊರೆತ ಅವಶೇಷಗಳು ಎಂಬುದನ್ನು ಗ್ರಾಮಸ್ಥರು ತಿಳಿಸುತ್ತಾರೆ. ಈ ಶಿಲ್ಪವು ಸುಮಾರು ಐದು ಅಡಿ ಎತ್ತರ, ಒಂದೂವರೆ ಅಡಿ ಅಗಲವಿದೆ. ಈ ಶಿಲ್ಪವನ್ನು ಹೊಯ್ಸಳರು ದೇವಾಲಯ ಮತ್ತು ಶಿಲ್ಪಗಳ ರಚನೆಗೆ ಬಳಸಿದ ಶಿಲೆಯಾದ ಹಸಿರು ಮಿಶ್ರಿತ ಬೂದುಬಣ್ಣದ ಬಳಪದ(ಕ್ಲೋರೋಸಿಸ್ಟ್) ಶಿಲೆಯಲ್ಲಿ ರಚನೆ ಮಾಡಲಾಗಿದೆ. ಶಿಲ್ಪಕ್ಕೆ ಬಳಸಿರುವ ಶಿಲೆ, ಶಿಲ್ಪದ ಶೈಲಿ ಮತ್ತು ಶಾಸನದ ಆಧಾರ ಮೇಲೆ ಈ ಶಿಲ್ಪವು ಹೊಯ್ಸಳ ಶೈಲಿಯ ಮತ್ತು ಹೊಯ್ಸಳರ ಕಾಲದ ಶಿಲ್ಪವೆಂದು ಹೇಳಬಹುದು. ಈ ಶಿಲ್ಪವು ಅತ್ಯಂತ ಸುಂದರವಾಗಿದ್ದು, ಅತ್ಯಂತ ಸೂಕ್ಷ್ಮ ಮತ್ತು ನವಿರಾದ ಕೆತ್ತನೆಗಳಿಂದ ಕೂಡಿದೆ. ಇದು ಹೊಯ್ಸಳ ಶಿಲ್ಪಕಲೆಯ ಕಲಾಪ್ರೌಢಿಮೆಗೆ ಸಾಕ್ಷಿಯಾಗಿದೆ.

ಮೆಣಿಸಿನಡುವಿನ ಸುಂದರವಾದ ಕೇಶವ ಮೂರ್ತಿಯು ಪದ್ಮಪೀಠದ ಮೇಲೆ ಸ್ಥಿರಪಾದ ಸಮಸ್ಥಾನಿಕ ಭಂಗಿಯಲ್ಲಿರುವನು. ಸುಂದರ, ಸೌಮ್ಯ, ಪ್ರಸನ್ನವದನ ಮುಖಭಾವವನ್ನು ಹೊಂದಿರುವನು. ಮುಖದಲ್ಲಿನ ಓರೆಕಣ್ಣುಗಳು, ಕಣ್ಣಿನ ಉಬ್ಬುಗಳು, ತುಟಿಗಳು ಕಿರುನಗೆಯನ್ನು ಸೂಸುವವಂತಿವೆ. ನೀಳವಾದ ಮೂಗು, ಕಿರುದಾದ ಗಲ್ಲ, ಉದ್ದವಾದ ಕಿವಿಗಳನ್ನು ಮತ್ತು ಅಗಲವಾದ ಭುಜವನ್ನು, ನೀಳವಾದ ದೇಹವನ್ನು ಹೊಂದಿರುವನು. ಪುಷ್ಟದಿಂದಿರುವ ನಿತಂಬ ಮತ್ತು ನೀಳವಾದ ಕೈ ಕಾಲುಗಳ ರಚನೆಯು, ತಾಳಮಾನವು ತಿಳಿಸುವಂತೆ ಉತ್ತಮ ಪುರುಷ ವದನನನ್ನು ರೂಪಿಸಲಾಗಿದೆ. ಕೇಶವ ಚತುರ್ಭುಜನಾಗಿದ್ದು, ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳನ್ನು ಕಟಿಕ ಮುದ್ರೆಯಲ್ಲಿಯೂ, ಕೆಳಗಿನ ಕೈಗಳು ವಕ್ರವಾಗಿದ್ದರೂ ಪದ್ಮ ಮತ್ತು ಗದೆಯ ಕೆಲವು ಭಾಗಗಳು ಕಾಣುವಂತಿರುವುದರಿಂದ, ಕೆಳಗಿನ ಬಲಗೈಯಲ್ಲಿ ಪದ್ಮವನ್ನು ಮತ್ತು ಎಡಗೈಯಲ್ಲಿ ಗದೆಯನ್ನು ಹಿಡಿದಿರುವನು. ಇವುಗಳನ್ನು ಮಣಿಗಳಿಂದ ಅಲಂಕರಿಸಲಾಗಿದೆ. ಕೇಶವನ ಶಿರದಲ್ಲಿ ಕಿರೀಟಮಕುಟವಿದ್ದು ಅದನ್ನು ಚಿಕ್ಕ ಮಣಿಸರ, ಮಣಿಮಾಲೆಗಳಿಂದ ಅಲಂಕರಿಸಲಾಗಿದೆ. ಕಿವಿಗಳಲ್ಲಿ ಮಕರಕುಂಡಲಗಳಿವೆ. ಭುಜದಲ್ಲಿ ಭುಜಕೀರ್ತಿಗಳು, ಬಾಹುಗಳಲ್ಲಿ ಕೇಯೂರಗಳು, ಕೈಗಳಲ್ಲಿ ದಪ್ಪವಾದ ಎರಡೆರಡು ಕೈಕಡಗಗಳು, ಕೊರಳಿನಲ್ಲಿ ಕಂಠಸರ,

[9] ವಸಂತಲಕ್ಷ್ಮಿ ಕೆ. (ಲೇ), ಗೋಪಾಲರಾವ್ ಎಚ್.ಎಸ್ (ಸಂ.). (2019) ಪೂರ್ವೋಕ್ತ. ಪುಟ. 39

ಪದಕದಹಾರ, ಮಣಿಹಾರ, ಯಜ್ಞೋಪವೀತ, ಉದರಬಂಧ, ಪದಕಗಳಿಂದ ಕೂಡಿದ ನಡುಪಟ್ಟಿ, ಮಣಿಮಾಲೆಗಳಿಂದ ಅಲಂಕರಿಸಿದ ವಸ್ತ್ರವೂ, ಉದ್ದವಾದ ವೈಜಯಂತಿಮಾಲೆ, ಕಾಲ್ಗಳಲ್ಲಿ ದಪ್ಪದಾದ ಕಾಲ್ಕಡಗಗಳು, ಪಾದಸರಗಳನ್ನು ಧರಿಸಿರುವನು. ಶಿಲ್ಪಿಯು ಅತ್ಯಂತ ಕಲಾಕೌಶ್ಯಲ್ಯತೆಯಿಂದ ವಿವಿಧ ಮಾದರಿಯ ಸುಂದರವಾದ ಆಭರಣಗಳ ಕತ್ತನೆಯನ್ನು ಮಾಡಿರುವನು. ಶಿಲ್ಪದ ಕೆಳಭಾಗದಲ್ಲಿ ಬಲಬದಿಯಲ್ಲಿ ಶ್ರೀದೇವಿಯು ದ್ವಿಭಂಗಿಯಲ್ಲಿ ಸ್ಥಾನಿಕ ಭಂಗಿಯಲ್ಲಿರುವಳು. ದ್ವಿಭುಜೆಯಾದ ಶ್ರೀದೇವಿಯು ಬಲಗೈಯಲ್ಲಿ ಕಮಲವನ್ನು, ಎಡಗೈಯಲ್ಲಿ ಕಳಶವನ್ನು ಹಿಡಿದಿರುವಳು. ಎಡಬದಿಯಲ್ಲಿ ಭೂದೇವಿಯು ದ್ವಿಭಂಗಿಯಲ್ಲಿ ಸ್ಥಾನಿಕ ಭಂಗಿಯಲ್ಲಿರುವಳು. ದ್ವಿಭುಜೆಯಾಗಿದ್ದು ಬಲಗೈಯಲ್ಲಿ ಫಲವನ್ನು, ಎಡಗೈಯಲ್ಲಿ ಪಾಶವನ್ನು ಹಿಡಿದಿರುವಳು. ಶ್ರೀದೇವಿ ಮತ್ತು ಭೂದೇವಿ ಉಬ್ಬು ಶಿಲ್ಪಗಳಿಗೂ ಸರ್ವಾಭರಣಗಳ ಅಲಂಕಾರವಿದೆ. ಈ ಶಿಲ್ಪಕ್ಕೆ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ, ಮಣಿ ಮುತ್ತುಗಳು, ಲಂಬ ರೇಖೆಗಳಿಂದ ಮತ್ತು ಶಂಖ ಮಾಲೆಗಳಿಂದ ಹಾಗೂ ಪುಷ್ಪಗಳಿಂದ ಅಲಂಕರಿಸಲಾದ, ಕೀರ್ತಿಮುಖವಿರುವ ಸುಂದರ ಪ್ರಭಾವಳಿಯು ಇದೆ. ಶಿಲ್ಪಿಯು ಈ ಶಿಲ್ಪದ ಪ್ರತೀ ಭಾಗವನ್ನು, ಅಸ್ತ್ರಗಳ ಪ್ರತೀ ಭಾಗವನ್ನು ನವಿರಾದ ಸೂಕ್ಷ್ಮ ಕೆತ್ತನೆಗಳು, ಮಣಿ ಮುತ್ತುಗಳಿಂದ ಅಲಂಕರಿಸಿ ಶಿಲ್ಪದ ಸೌಂದರ್ಯವನ್ನು ಹೆಚ್ಚಿಸಿರುವುದು ಹೊಯ್ಸಳ ಕಾಲದ ಶಿಲ್ಪಿಯ ಕಲಾಪ್ರೌಡಿಮೆಗೆ ಸಾಕ್ಷಿಯಾಗಿದೆ. ತಾಳಮಾನ ಪ್ರಮಾಣಬದ್ದವಾಗಿರುವ ಈ ಶಿಲ್ಪವು ರೂಪಮಂಡಣದ ಶಿಲ್ಪ ಲಕ್ಷಣಗಳಿಗೆ ಅನುಗುಣವಾಗಿ ರೂಪಿತವಾಗಿದೆ. ಈ ಶಿಲ್ಪದಲ್ಲಿ ವಿಷ್ಣುವು ತನ್ನ ಕೈಗಳಲ್ಲಿ ಹಿಡಿದಿರುವ ಅಸ್ತ್ರಗಳ ಕ್ರಮದ ಆಧಾರದಲ್ಲಿ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳಲ್ಲಿನ ವಿವರಣೆಗಳ ಆಧಾರದ ಪ್ರಕಾರ ಈ ಶಿಲ್ಪವು ವಿಷ್ಣುವಿನ ಚತುರ್ವಿಂಶತಿ ಮೂರ್ತಿ ಶಿಲ್ಪಗಳಲ್ಲಿ ಮೊದಲನೆಯ ಸ್ವರೂಪವಾದ ಕೇಶವ ಮೂರ್ತಿಯಾಗಿದೆ ಎಂದು ಹೇಳಬಹುದು. ಶಿಲ್ಪದ ರಚನೆಗೆ ಬಳಸಿರುವ ಶಿಲೆ ಹಸಿರು ಮಿಶ್ರಿತ ಬೂದುಬಣ್ಣದ ಬಳಪದ(ಕ್ಲೋರೋಸಿಸ್ಟ) ಶಿಲೆಯಾಗಿರುವುದು, ಶಿಲ್ಪದಲ್ಲಿ ಅತ್ಯಂತ ಸೂಕ್ಷ್ಮ, ನವಿರಾದ ಕೆತ್ತನೆಗಳನ್ನು ಮಾಡಿರುವುದು. ಅಲಂಕೃತವಾದ ಆಭರಣಗಳ ರಚನೆ, ಶಿಲ್ಪಿಯು ಆಯುಧಗಳಿಗೂ ಮುತ್ತಿನ ಹಿಡಿಕೆಗಳನ್ನು ಜೋಡಿಸಿ ಅಂದವಾಗಿಸಿರುವುದಲ್ಲದೆ ಆಯುಧಗಳ ವಿನ್ಯಾಸವು ಸ್ಪಷ್ಟವಾಗಿರುವುದು, ಸೂಕ್ಷ್ಮ ಕೆತ್ತನೆಯಿರುವ ಕಿರೀಟಮಕುಟ, ಕಿರೀಟಮಕುಟಕ್ಕೆ ಆಭರಣಪಟ್ಟಿಯನ್ನು ವಿನ್ಯಾಸಗೊಳಿಸಿರುವುದು, ಕಿರೀಟಮಕುಟವೇ ಎದ್ದು ಕಾಣುವಂತಿರುವ ಚಿಕ್ಕದಾದ ಮುಖ, ನೀಳವಾದ ದೇಹದ ರಚನೆ, ಕೈ ಮತ್ತು ಕಾಲ್ಗಳಲ್ಲಿನ ಬೆರಳುಗಳು ಉದ್ದವಾಗಿದ್ದು, ಉಗುರುಗಳು ಹೆಚ್ಚು ಮೆರಗಿನಿಂದ ಕೂಡಿರುವುದು ಮತ್ತು ಶಂಖ ಮಾಲೆಗಳಿಂದ ಅಲಂಕೃತವಾದ ಪ್ರಭಾವಳಿ ಶಿಲ್ಪದಲ್ಲಿನ ಈ ಎಲ್ಲಾ ಲಕ್ಷಣಗಳು ಹೊಯ್ಸಳ ಶಿಲ್ಪಕಲಾ ಶೈಲಿಯ ಲಕ್ಷಣಗಳಾಗಿದ್ದು, ಈ ಕೇಶವನ ಮೂರ್ತಿ ಶಿಲ್ಪವು ಹೊಯ್ಸಳರ ರಚನೆಯೇ ಆಗಿರುವುದನ್ನು ಸೂಚಿಸುತ್ತದೆ. ಈ ಶಿಲ್ಪದ ಅಧ್ಯಯನದಿಂದ ಈ ಪ್ರದೇಶದಲ್ಲಿ ಹೊಯ್ಸಳ ಶಿಲ್ಪಕಲಾಶೈಲಿಯು ಬೆಳವಣಿಗೆಯಾಗಿರುವುದು ಮತ್ತು ಜನರು ಕೇಶವನನ್ನು ಅತ್ಯಂತ ಭಕ್ತಿಪೂರ್ವಕವಾಗಿ ಆರಾಧಿಸುತ್ತಿದ್ದರೆಂಬುದು ತಿಳಿಯುತ್ತದೆ.

**ಆಕರ ಗ್ರಂಥಗಳು**


- ರೈಸ್.ಬಿ.ಎಲ್ (ಸಂ.). (1903). *ಎಫಿಗ್ರಫಿಯ ಕರ್ನಾಟಿಕ ಸಂಪುಟ–11 (ಚಿತ್ರದುರ್ಗ ಜಿಲ್ಲೆ),* ಮೈಸೂರು ಗೌವರ್ನಮೆಂಟ್ ಸೆಂಟ್ರಲ್ ಪ್ರೆಸ್.
- ರೈಸ್.ಬಿ.ಎಲ್. (ಸಂ.). (1904). *ಎಫಿಗ್ರಫಿಯ ಕರ್ನಾಟಿಕ ಸಂಪುಟ–12 (ತುಮಕೂರು ಜಿಲ್ಲೆ).* ಮೈಸೂರು ಗೌವರ್ನಮೆಂಟ್ ಸೆಂಟ್ರಲ್ ಪ್ರೆಸ್.
- ವಸಂತಲಕ್ಷ್ಮಿ ಕೆ. (ಲೇ), ಗೋಪಾಲರಾವ್ ಎಚ್.ಎಸ್ (ಸಂ.). (2019). *ಹೊಯ್ಸಳ ಶಿಲ್ಪಕಲೆ.* ಕರ್ನಾಟಕ ಶಿಲ್ಪಕಲಾ ಅಕಾಡಮಿ.

- ರಾಮಚಂದ್ರರಾವ್.ಸಾ.ಕೃ. (2013). *ಮೂರ್ತಿಶಿಲ್ಪ ನೆಲೆ–ಹಿನ್ನೆಲೆ.* ಸುರಮಾ ಪ್ರಕಾಶನ.
- Gopinatha Rao. T.A, (2021). *Elements of Hindu Iconography vol-1 part-1*, Mothilal Banarasidas Publishing House.
- Ramachandra Rao.S. K. (1991). *Pratima Kosha Volume-2*, Kalpatharu Research Academy.


**ಅನುಬಂಧ 1**
**ಛಾಯಾಚಿತ್ರಗಳು**



ಚಿತ್ರ 1: ಮೆಣಿಸಿನಡು ಹೊಯ್ಸಳ ಶಾಸನ



ಚಿತ್ರ 2: ಹೊಯ್ಸಳರ ಕೇಶವ ಮೂರ್ತಿ, ಮೆಣಿಸಿನಡು



ಚಿತ್ರ 3: ಸಂರಕ್ಷಿತ ಕೇಶವಮೂರ್ತಿ, ಮೆಣಿಸಿನಡು